LIBRARY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

DEPARTMENT / SUBJECT: ಉಸ್ತುವಾರಿ

NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 17/9/19

## ಅಂದುಕೊಂಡ ಕ್ಷೇತ್ರದ ಹೊಣೆ ಸಿಗದಿದ್ದಕ್ಕೆ ಕೆಲವರ ಬೇಸರ

# ಜಿಲ್ಲಾ ಉಸ್ತುವಾರಿಗಳ ನೇಮಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಧಿಕಾರ ಸ್ವೀಕರಿಸಿದ 25 ದಿನದ ನಂತರ ಜಿಲ್ಲಾ ಉಸ್ತುವಾರಿ ಸಚಿವರ ಸ್ಥಾನ ಪಡೆಯುವ ಭಾಗ್ಯ ಬಿಜೆಪಿ ಸರಕಾರದ ಸಚಿವರದ್ದಾಗಿದ್ದು, ಉಸ್ತುವಾರಿ ಸಚಿವರ ಘೋಷಣೆಯನ್ನು ಸೋಮವಾರ ಅಧಿಕೃತವಾಗಿ ಮಾಡಲಾಗಿದೆ.

ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದು ಬಹುತೇಕ ಎರಡು ತಿಂಗಳು ಕಳೆದರೂ ಜಿಲ್ಲಾ ಉಸ್ತುವಾರಿ ಹಂಚಿಕೆ ಸಾಧ್ಯವಾಗಿರಲಿಲ್ಲ. ಉಸ್ತುವಾರಿಗಳ ನೇಮಕ ತಡವಾದ ಕಾರಣ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದಿದ್ದವು. ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಹೊಣೆಯನ್ನು ಹಂಚಿಕೆ ಮಾಡಿದ್ದು, ಇದು ಕೂಡ ಹೈಕಮಾಂಡ್ ಆದೇಶದಂತೆಯೇ ಆಗಿದೆ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತಿದೆ.

ಬಿಎಸ್‌ವೈ ಜುಲೈ 26ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದ್ದರು. ಆದರೆ, ಬಹುತೇಕ ಒಂದು ತಿಂಗಳು ಕಾಲ ಸಚಿವ ಸಂಪುಟ ವಿಸ್ತರಣೆಗೆ ಹೈಕಮಾಂಡ್ ಒಪ್ಪಿಗೆ ನೀಡಿರಲಿಲ್ಲ. ಅಂತಿಮವಾಗಿ ಆಗಸ್ಟ್ 20ರಂದು ಸಂಪುಟ ಸಚಿವರನ್ನಾಗಿ 17 ಶಾಸಕರನ್ನು ಆಯ್ಕೆ ಮಾಡಲಾಯಿತು. ಇದೇ ಮೊದಲ ಬಾರಿಗೆ ಆಗಸ್ಟ್ 15ರಂದು ಉಸ್ತುವಾರಿ ಸಚಿವರಿಲ್ಲದೆ ಧ್ವಜಾರೋಹಣ ಮಾಡಲಾಗಿತ್ತು. ಜತೆಗೆ ಉಸ್ತುವಾರಿ ಸಚಿವರಿಲ್ಲದಿರುವುದು ಪ್ರವಾಹ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ನಡೆಸಲು ಹಿನ್ನಡೆಯಾಗಿತ್ತು.

ಈ ಎಲ್ಲ ಬೆಳವಣಿಗೆ ನಡುವೆ ಕೆಲ ಜಿಲ್ಲೆಗಳ ಉಸ್ತುವಾರಿ ಪಡೆಯಲು ಕೆಲವರು ಪೈಪೋಟಿಗೆ ಬಿದ್ದಿದ್ದರು. ಜತೆಗೆ, ಬಿಜೆಪಿ ಅಧಿಕಾರ ಪಡೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಅನರ್ಹ ಶಾಸಕರ ಕುರಿತು ಸುಪ್ರೀಂ ತೀರ್ಪು ಗಮನಿಸಿ ನಂತರ ಉಸ್ತುವಾರಿ ನೇಮಕ ಮಾಡಲು ಬಿಜೆಪಿ ತೀರ್ಮಾನಿಸಿತ್ತು. ಆದರೆ, ಅನರ್ಹರ ತೀರ್ಪು ವಿಳಂಬವಾದ ಹಿನ್ನೆಲೆಯಲ್ಲಿ ಉಸ್ತುವಾರಿ ನೇಮಕಕ್ಕೆ ಅಸ್ತು ಎನ್ನಲಾಗಿದೆ. ಉಳಿದ ಜಿಲ್ಲೆಗೆ ನೇಮಕವಾಗಬಹುದಾದ ಉಸ್ತುವಾರಿ ಸಚಿವರನ್ನು ಗಮನದಲ್ಲಿಟ್ಟುಕೊಂಡೇ ಎರಡೆರಡು ಜಿಲ್ಲೆಗಳನ್ನು ಕೆಲವರಿಗೆ ನೀಡಲಾಗಿದೆ.

## ಬೆಂಗಳೂರು ನಗರ ವಹಿಸಿಕೊಂಡ ಸಿಎಂ

ಬೆಂಗಳೂರು ನಗರ ಜಿಲ್ಲೆಯ ಉಸ್ತುವಾರಿಗಾಗಿ ಬಿಜೆಪಿಯಲ್ಲಿ ಭಾರಿ ಪೈಪೋಟಿ ಕಂಡುಬಂದಿತ್ತು. ಡಿಸಿಎಂ ಸ್ಥಾನ ವಂಚಿತ ಆರ್.ಅಶೋಕ ಮತ್ತು ಡಿಸಿಎಂ ಅಶ್ವತ್ಥ ನಾರಾಯಣ ನಡುವೆ ನಗರದ ಉಸ್ತುವಾರಿ ಪಡೆಯುವ ಸಂಬಂಧ ಪೈಪೋಟಿ ನಡೆದಿತ್ತು. ಆದರೆ, ನಗರದ ಉಸ್ತುವಾರಿಯನ್ನು ಸ್ವತಃ ಸಿಎಂ ಯಡಿಯೂರಪ್ಪ ಉಳಿಸಿಕೊಳ್ಳುವ ಮೂಲಕ ಈ ಇಬ್ಬರು ನಾಯಕರಿಗೆ ನಿರಾಸೆ ಮೂಡಿಸಿದ್ದಾರೆ. ಅಶೋಕಗೆ ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಮತ್ತು ಅಶ್ವತ್ಥ ನಾರಾಯಣ ಅವರಿಗೆ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಉಸ್ತುವಾರಿ ನೀಡುವ ಮೂಲಕ ಬೆಂಗಳೂರು ನಗರವನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಖಾತೆಯೂ ಸಿಎಂ ಬಳಿಯೇ ಇದ್ದು ಉಸ್ತುವಾರಿಯನ್ನು ಉಳಿಸಿಕೊಂಡಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಕೂಡ ಬೆಂಗಳೂರು ನಗರಾಭಿವೃದ್ಧಿ ಖಾತೆ ಜತೆಗೆ ನಗರದ ಉಸ್ತುವಾರಿಯನ್ನು ಕೆಲ ದಿನಗಳ ಕಾಲ ಉಳಿಸಿಕೊಂಡಿದ್ದರು.



### ಜಿಲ್ಲಾ ಉಸ್ತುವಾರಿ ವಿವರ

- ಬಿ.ಎಸ್.ಯಡಿಯೂರಪ್ಪ: ಬೆಂಗಳೂರು ನಗರ
- ಗೋವಿಂದ ಕಾರಜೋಳ: ಬಾಗಲಕೋಟೆ / ಕಲಬುರಗಿ
- ಡಾ.ಅಶ್ವತ್ಥನಾರಾಯಣ: ರಾಮನಗರ / ಚಿಕ್ಕಬಳ್ಳಾಪುರ
- ಲಕ್ಷ್ಮಣ ಸವದಿ: ಬಳ್ಳಾರಿ / ಕೊಪ್ಪಳ
- ಕೆ.ಎಸ್.ಈಶ್ವರಪ್ಪ: ಶಿವಮೊಗ್ಗ / ದಾವಣಗೆರೆ
- ಆರ್.ಅಶೋಕ್: ಬೆಂಗಳೂರು ಗ್ರಾಮಾಂತರ / ಮಂಡ್ಯ
- ಪ್ರಭು ಚೌಹಾಣ್: ಬೀದರ್ / ಯಾದಗಿರಿ
- ಶ್ರೀರಾಮುಲು: ರಾಯಚೂರು / ಚಿತ್ರದುರ್ಗ
- ಎಚ್.ನಾಗೇಶ್: ಕೋಲಾರ
- ಸುರೇಶ್ ಕುಮಾರ್: ಚಾಮರಾಜನಗರ
- ಜಗದೀಶ್ ಶೆಟ್ಟರ್: ಬೆಳಗಾವಿ / ಧಾರವಾಡ
- ಸಿ.ಟಿ.ರವಿ: ಚಿಕ್ಕಮಗಳೂರು
- ಕೋಟ ಶ್ರೀನಿವಾಸ ಪೂಜಾರಿ: ದಕ್ಷಿಣಕನ್ನಡ
- ಬಸವರಾಜ್ ಬೊಮ್ಮಾಯಿ: ಉಡುಪಿ / ಹಾವೇರಿ
- ಜೆ.ಸಿ.ಮಾಧುಸ್ವಾಮಿ: ತುಮಕೂರು / ಹಾಸನ
- ಸಿ.ಸಿ.ಪಾಟೀಲ್: ಗದಗ / ವಿಜಯಪುರ
- ಶಶಿಕಲಾ ಜೊಲ್ಲೆ: ಉತ್ತರ ಕನ್ನಡ

### ಅಲ್ಲಲ್ಲಿ ಆಕ್ರೋಶ

ಸಚಿವರ ಸ್ಥಾನ ಸಿಗದಿದ್ದ ಕಾರಣಕ್ಕೆ ಆಕ್ರೋಶ ಶುರುವಾದಂತೆಯೇ ಜಿಲ್ಲಾ ಉಸ್ತುವಾರಿ ಸ್ಥಾನ ತಾವು ಮೆಚ್ಚಿದ್ದು ಸಿಗದಿದ್ದ ಕಾರಣಕ್ಕೆ ಕೆಲ ನಾಯಕರು ಆಕ್ರೋಶಗೊಂಡಿದ್ದಾರೆ. ಅಶ್ವತ್ಥ ನಾರಾಯಣ ಮತ್ತು ಆರ್. ಅಶೋಕ ಬೆಂಗಳೂರು ನಗರದ ಮೇಲೆ ಕಣ್ಣಿಟ್ಟಿದ್ದರು. ಆದರೆ, ನಗರ ಉಸ್ತುವಾರಿಯನ್ನು ಸಿಎಂ ಉಳಿಸಿಕೊಂಡಿದ್ದಾರೆ. ಡಿಸಿಎಂ ಲಕ್ಷ್ಮಣ ಸವದಿ ಬೆಳಗಾವಿ ಜಿಲ್ಲೆಯ ಉಸ್ತುವಾರಿ ಮೇಲೆ ಕಣ್ಣಿಟ್ಟಿದ್ದರು. ಆದರೆ ಅದು ಜಗದೀಶ್ ಶೆಟ್ಟರ್ ಪಾಲಾಗಿದೆ. ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಮೇಲೆ ಕಣ್ಣಿಟ್ಟಿದ್ದ ಶ್ರೀರಾಮುಲು ಬದಲಿಗೆ ಸವದಿಗೆ ಸ್ಥಾನ ನೀಡಲಾಗಿದ್ದು, ಶ್ರೀರಾಮುಲು ಚಿತ್ರದುರ್ಗ ಮತ್ತು ಹೆಚ್ಚುವರಿಯಾಗಿ ರಾಯಚೂರು ಜಿಲ್ಲೆಯ ಉಸ್ತುವಾರಿ ಹೊಂದಿದ್ದಾರೆ.